# ಆಡಿಷನ್ ಕೊಟ್ಟು ಪಾತ್ರ ಪಡೆದಿಲ್ಲ



**ಸನಾತನಿ ಉದಯದ ಕನ್ಯಾದಾನ 'ಅರ್ಚನಾ'**

◆ **ಕನ್ಯಾದಾನದಲ್ಲಿ ನಿಮ್ಮ ಪಾತ್ರದ ಸ್ವರೂಪ ಹೇಗಿದೆ?**

'ಅರ್ಚನಾ' ಐದು ಮಕ್ಕಳಲ್ಲಿ ಹಿರಿಯಳು. ಅದರಲ್ಲಿ ನಾಲ್ಕು ಮಕ್ಕಳಿಗೆ ಮದುವೆ ಆಗಿರುತ್ತದೆ. ನಾಲ್ಕು ಅಳಿಯಂದಿರೂ ಭಿನ್ನ ಮನೋಭಾವದವರು. ದೊಡ್ಡವಳಾದ ನಾನು ಸೋದರ ಮಾವನನ್ನು ಮದುವೆ ಆಗಿರುತ್ತೇನೆ. ಕಥೆಯಲ್ಲಿ ಪ್ರಮುಖವಾದ ಸ್ಥಾನ ಇದಕ್ಕಿದೆ. ಈ ಕಥೆಯನ್ನು ಮೊದಲು ಕೇಳಿದಾಗ ಹಳ್ಳಿ ಹುಡುಗಿಯ ಪಾತ್ರ ಅಂದುಕೊಂಡಿದ್ದೆ. ವಾಸ್ತವದಲ್ಲಿ ಹಾಗೆ ಇಲ್ಲ. ಸಿಟ್ಟು ಮುಗ್ಧತೆ ಇದೆ. ಈಕೆ ತನ್ನ ಭಾವನೆಗಳನ್ನು ಎಂದೂ ಹತ್ತಿಕ್ಕಿಕೊಳ್ಳುವುದಿಲ್ಲ. ತನಗೆ ಅನ್ನಿಸಿದ್ದನ್ನು ನೇರವಾಗಿ ಹೇಳುತ್ತಾಳೆ. ಪ್ರಾಮಾಣಿಕ ಬದುಕು ಅವಳದು. ನೇರ ನಡೆ ನುಡಿಯ ಅವಳು ಒರಟು ಅನ್ನಿಸುತ್ತದೆ. ಆದರೂ ಮನಸ್ಸಿನಲ್ಲಿ ಏನೂ ದುಷ್ಟತನವನ್ನು ಇಟ್ಟುಕೊಂಡಿರುವುದಿಲ್ಲ. ಇದುವರೆಗೂ ಮೃದು ಸ್ವಭಾವದ ಪಾತ್ರಗಳನ್ನೇ ಪ್ರತಿನಿಧಿಸುತ್ತಿದ್ದ ನನಗೆ ಇದು ಹೊಸತೆನಿಸಿತು. ಪಾತ್ರದ ನಾಡಿಯನ್ನು ಹಿಡಿಯುವುದು ಸ್ವಲ್ಪ ಕಷ್ಟ ಆಗಿತ್ತು. ಕ್ರಮೇಣ ಹಿಡಿಸಿತು. ಪಾತ್ರ ತುಂಬ ಚೆನ್ನಾಗಿದೆ. ವೀಕ್ಷಕರೂ ಇಷ್ಟಪಟ್ಟು ನೋಡುತ್ತಿದ್ದಾರೆ.

◆ **ಕಲಾತ್ಮಕ ಸಿನಿಮಾ ಮತ್ತು ಧಾರಾವಾಹಿಗಳ ನಾಟಕೀಯ ಪಾತ್ರ ಯಾವುದು ಇಷ್ಟವಾಗುತ್ತದೆ?**

ಎರಡೂ ಕಡೆ ಕೆಲಸ ಮಾಡುತ್ತೇನೆ ಎನ್ನುವ ಖುಷಿ. ಎರಡು ರಂಗದಲ್ಲಿ ಎಲ್ಲರಿಗೂ ಕೆಲಸ ಮಾಡುವ ಅವಕಾಶ ಇರುವುದಿಲ್ಲ. ಖಂಡಿತ ವ್ಯತ್ಯಾಸ ಇದ್ದೇ ಇರುತ್ತದೆ. ಸೀರಿಯಲ್ ಕೆಲಸವೇ ಬೇರೆ. ಸಿನಿಮಾದಲ್ಲಿಯೂ ಕಲಾತ್ಮಕ ಮತ್ತು ಕಮರ್ಷಿಯಲ್ ಸಿನಿಮಾಗಳ ಧಾಟಿ ಬೇರೆ. ಒಟ್ಟಾರೆ ಈ ಕಲಾಪ್ರಕಾರ ಸಂಕೀರ್ಣವಾಗಿರುತ್ತದೆ. ಯಾವ ವಿಷಯದ ಮೇಲೆ ಕೆಲಸ ಮಾಡುತ್ತಿದ್ದೇವೆ ಎನ್ನುವುದರ ಮೇಲೆ ಅಭಿನಯವನ್ನು ನಾವು ರೂಪಿಸಿಕೊಳ್ಳಬೇಕಾಗುತ್ತದೆ. ಇಂತಹ ವ್ಯತ್ಯಾಸ ನನ್ನ ಅನುಭವದಿಂದ ಕಂಡಿದ್ದೇನೆ. ಕಷ್ಟ ಅನ್ನಿಸುತ್ತದೆ. ಅದು ಇದ್ದಾಗಲೇ ಖುಷಿ ಎನ್ನುವುದು ಸಿಗುತ್ತದೆ. ಕೆಲಸ ಸುಲಭ ಅನ್ನಿಸಿದರೆ ಮಜಾ ಅನ್ನಿಸುವುದಿಲ್ಲ. ವೈವಿಧ್ಯವನ್ನು ಎದುರಿಸುವುದೇ ಚೆನ್ನಾಗಿರುತ್ತದೆ. ಅದಕ್ಕೆ ನ್ಯಾಯ ಕೊಡಲು ಒಂದಿಷ್ಟು ಕೆಲಸ ಮಾಡಬೇಕಾಗುತ್ತದೆ.

◆ **ಶೋ– ನಟನೆ ಯಾವುದು ಒಲವಿನ ವೃತ್ತಿ?**

ಪಾತ್ರ ಅಂತ ಮಾಡುವಾಗ ಬೇರೆಯ ರೀತಿಯ ಮಜಾ ಇರುತ್ತದೆ. ಬೇರೆ ಬೇರೆಯ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಅದರಲ್ಲಿ ಭಿನ್ನತೆ ಇರುತ್ತದೆ. ಅಲ್ಲಿ ವ್ಯತ್ಯಾಸವನ್ನು ಹಾಗೆಯೇ ತೆಗೆದುಕೊಂಡು ಹೋಗಬೇಕಾಗುತ್ತದೆ. ಉದಯದಲ್ಲಿ 'ಲಾಫಿಂಗ್ ಶೋ' ನಿರೂಪಣೆ ಮಾಡುತ್ತಿದ್ದೇನೆ. ಇದಕ್ಕೆ ಒಂದು ಫಾರ್ಮಾಟ್ ಇದೆ. ಅದರ ಫ್ರೇಮ್‌ನಲ್ಲೇ ಸ್ಕ್ರಿಪ್ಟ್ ರಚನೆಯಾಗುತ್ತದೆ. ನಮ್ಮ ಮಾತಿನಲ್ಲಿ ವಿಷಯ ಬೇರೆ ಬೇರೆ ಬರುತ್ತದೆ. ಆದರೆ, ಅದಕ್ಕೆ ಮಿತಿ ಇರುತ್ತದೆ. ಇಬ್ಬರು ಅತಿಥಿಗಳ ಜೊತೆ ಮಾತುಕತೆ ಮಾಡುವುದರಿಂದ ಆ ಮೂಲಕ ಸಮಾಜಕ್ಕೆ ಸ್ಪಂದಿಸುತ್ತೇವೆ. ಆಹ್ವಾನಿತರ ಜೊತೆ ನನ್ನ ಸ್ವಂತ ಪ್ರಶ್ನೆಗಳೂ ಇರುತ್ತವೆ. ನಿರೂಪಣೆಯಲ್ಲಿ ಬೇರೆಯದೇ ಕೆಲಸ. ವೀಕ್ಷಕರನ್ನು ಹಿಡಿದಿಡಬೇಕು ಅದೇ ಪ್ರಮುಖ ಸವಾಲು. ಅದನ್ನು ನಿಭಾಯಿಸುವುದು, ನಟಿಸುವುದು ಬೇರೆ. ವೈಯಕ್ತಿಕವಾಗಿ ಎರಡನ್ನೂ ಎಂಜಾಯ್ ಮಾಡುತ್ತೇನೆ.

◆ **ನಟನೆ ಆರಂಭ ಹೇಗಾಯಿತು ಹೇಳಬಹುದಾ?**

ಹುಬ್ಬಳ್ಳಿ ಮೂಲದ ನಾನು ದಾವಣಗೆರೆ, ಬಾಂಬೆಯನ್ನು ಸುತ್ತಿ ಈಗ ಬೆಂಗಳೂರಿಗೆ ಬಂದು ನೆಲೆಸಿದ್ದೇನೆ. ಹರೆಯದಲ್ಲೇ ನನಗೆ ಡಾನ್ಸ್ ಪ್ಯಾಷನ್ ಆಗಿತ್ತು. ಆಗಲೇ ಅಭಿನಯ ಲೋಕಕ್ಕೆ ಪ್ರವೇಶ ಮಾಡಬೇಕು ಎನ್ನುವ ಮನಸ್ಸು ಬಂತು. ಅದಕ್ಕೆ ಮೂಲ ನನ್ನ ತಾಯಿಗೆ ನಾನು ಕಲಾವಿದೆಯಾಗಬೇಕು ಎನ್ನುವ ಒತ್ತಾಸೆ. ಭರತನಾಟ್ಯವನ್ನು ಶಾಸ್ತ್ರೀಯವಾಗಿ ಕಲಿತೆ. ಅದು ನಾನು ಅಂದುಕೊಂಡಂತೆ ನಟನೆಗೆ ನೆರವಾಗುತ್ತಿದೆ. 'ಎಷ್ಟು ನಗ್ತಿ ನಗು' ಸಿನಿಮಾದ ಮೂಲಕ ನಟಿಯಾದೆ. 'ಕ್ರೇಜಿ ಕುಟುಂಬ', 'ನಮ್ಮಣ್ಣ ಡಾನ್' ಸಿನಿಮಾಗಳಲ್ಲಿ ನಾಯಕಿಯಾಗಿ ನಟಿಸಿದೆ. 'ಒಗ್ಗರಣೆ ಡಬ್ಬಿ' ಶೋ ಮಾಡಿದೆ. ಸಿನಿಮಾ ಮಾಡುತ್ತಲೇ 'ಗೃಹಲಕ್ಷ್ಮಿ' ಸೀರಿಯಲ್‌ಗೆ ಬಂದೆ. ಇಲ್ಲಿ ನಟನೆಗೆ ಸಂಬಂಧಿಸಿದಂತೆ ತುಂಬ ಕಲಿತಿದ್ದೇನೆ.

ನನ್ನ ತಾಯಿ ಕಲಾವಿದೆಯಾಗಿ ಒಳ್ಳೆಯ ಹೆಸರು ಗಳಿಸಬೇಕು ಎಂದು ಹೇಳುತ್ತಿದ್ದರು. ಹಳೆಯ ಸಿನಿಮಾಗಳನ್ನು ತೋರಿಸಿ ಈ ರೀತಿ ನೀನು ಆಗಬೇಕು ಎಂದು ಹೇಳುತ್ತಾ ಭಾರತಿ, ಮಂಜುಳಾ, ಜಯಂತಿ ಅವರನ್ನು ಪರಿಚಯಿಸಿದರು. ಜೊತೆಗೆ ಸಿದ್ದಲಿಂಗಯ್ಯ, ಪುಟ್ಟಣ್ಣ ಅವರ ಅನೇಕ ಸಿನಿಮಾಗಳನ್ನು ತೋರಿಸಿದರು. ಅದು ನನಗೆ ಸ್ಫೂರ್ತಿಯನ್ನು ನೀಡುತ್ತಿತ್ತು. 'ಈಶ್ವರ ಅಲ್ಲ ನೀನೇ ಎಲ್ಲ'ದಲ್ಲಿ ತತ್ವಪದ ಇತ್ತು. ಅದರಲ್ಲಿ ಹಾಗೆ ಬಂದು ಹೋಗುವ ಪುಟ್ಟ ಪಾತ್ರ. ಅದೇ ನನ್ನ ಮೊದಲ ಪ್ರಯತ್ನ. ಆದರೂ ತುಂಬ ಚಿಕ್ಕ ವಯಸ್ಸಿನಲ್ಲೇ ಪರಿಚಯ ಆದೆ. ಆಡಿಷನ್ ನೀಡಿ ನಾನು ಬಂದಿಲ್ಲ. ಫೋಟೊ ನೋಡಿಯೇ ಅವಕಾಶವನ್ನು ಕೊಟ್ಟಿದ್ದಾರೆ.

■ ರಾಘವೇಂದ್ರ ಕೆ.